AUGUST 06, 2024

AKASHAVANI - DHARWAD

PRADESH SAMACHARA (KANNADA) 7:05 AM

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು

<><><>

- ಮುಳುಗಡೆ ಗ್ರಾಮಗಳಿಗೆ ಶಾಶ್ವತ ಪುನರ್ವಸತಿ ಕಲ್ಪಿಸಲು, ಸರ್ಕಾರ ಬದ್ಧ– ಮುಖ್ಯಮಂತ್ರಿ ಸಿದ್ದರಾಮಯ್ಯ.
- ಮಲೆನಾಡಿನ ಗುಡ್ಡ ಕುಸಿತದ ಘಟನೆ ತಡೆಯಲು, ವೈಜ್ಞಾನಿಕ ಕಾಮಗಾರಿ – ಕೃ ್ಣ ಬೈರೇಗೌಡ.
- ಓರ್ವ ಅಂಗಾಂಗ ದಾನಿ, ಎಂಟು ಜೀವಗಳನ್ನು ಉಳಿಸಬಹುದು – ದಿನೇಶ್ ಗುಂಡೂರಾವ್.
- ಆಗಸ್ಟ್ 12, ವಿಶ್ವ ಆನೆ ದಿನ; ಮಾನವ ಹಾಗೂ ಆನೆ ಸಂಘರ್ಷ ಕುರಿತ, ಅಂತಾರಾಷ್ಟ್ರೀಯ ಸಮ್ಮೇಳನ – ಈಶ್ವರ ಖಂಡ್ರೆ.

<><><>

ಈಗ ವಾರ್ತೆಗಳ ವಿವರ

<><><>

ಮುಳುಗಡೆಯಾಗುವ ಗ್ರಾಮಗಳ ಸಂತ್ರಸ್ತರನ್ನು, ಸುರಕ್ಷಿತ ಸ್ಥಳದಲ್ಲಿ ಪುನರ್ವಸತಿಗೆ, ಶಾಶ್ವತ ಪರಿಹಾರ ಕಲ್ಪಿಸಲು, ಸರ್ಕಾರ ಯೋಜಿಸಿದೆ; ಸಂತ್ರಸ್ತರು ಸಹಕರಿಸಬೇಕು ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಮನವಿ ಮಾಡಿದ್ದಾರೆ. ಬೆಳಗಾವಿ ಜಿಲ್ಲೆಯ ನೆರೆ ಬಾಧಿತ ಪ್ರದೇಶಗಳ ಸ್ಥಿತಿಗತಿ ಪರಿಶೀಲಿಸಲು, ಭೇಟಿ ನೀಡಿದ ಸಂದರ್ಭದಲ್ಲಿ, ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ಇಡೀ ಮನೆ ಕಳೆದುಕೊಂಡ ಸಂತ್ರಸ್ತ ಕುಟುಂಬಕ್ಕೆ, ತಮ್ಮ ಸರ್ಕಾರ ಮನೆ ನಿರ್ಮಿಸಿ ಕೊಟ್ಟು, 1 ಲಕ್ಷ 20 ಸಾವಿರ ರೂಪಾಯಿಗಳ ಪರಿಹಾರ ನೀಡಲಿದೆ ಎಂದರು.

<><><>

ಬಳಿಕ ಮುಖ್ಯಮಂತ್ರಿ, ಘಟಪ್ರಭಾ ನದಿಯ ಲೋಳಸೂರ ಸೇತುವೆ ಮುಳುಗಡೆಯಾಗಿದ್ದನ್ನು, ವೀಕ್ಷಿಸಿದರು.

<><><>

ಸಂಕೇಶ್ವರ–ಯರಗಟ್ಟಿ ಮಧ್ಯದ ರಾಜ್ಯ ಹೆದ್ದಾರಿಯ, ಲೋಳಸೂರ ಸೇತುವೆ ಹಳೆಯದಾಗಿದ್ದು, ಮರು ನಿರ್ಮಿಸುವ ಅಗತ್ಯವಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಅವರು ಮುಖ್ಯಮಂತ್ರಿಯವರಿಗೆ, ಮನವಿ ಸಲ್ಲಿಸಿದರು.

<><><>

ಗೋಕಾಕ ಸರಕಾರಿ ಮುನ್ಸಿಪಲ್ ಕಾಲೇಜಿನ ಕಾಳಜಿ ಕೇಂದ್ರಕ್ಕೆ ಭೇಟಿ ನೀಡಿದ ಸಿದ್ದರಾಮಯ್ಯ ಅವರು, ಸಂತ್ರಸ್ತರ ಜತೆ ಚರ್ಚಿಸಿದರು.

<><><>

ಗೋಕಾಕ, ಚಿಕ್ಕೋಡಿ ಮತ್ತು ಕಾಗವಾಡ ತಾಲೂಕಿನ ಜುಗೂಳ ಗ್ರಾಮದ ಸುತ್ತಲಿನ ನೆರೆ ಹಾವಳಿ ಪರಿಸ್ಥಿತಿ ವೀಕ್ಷಿಸಿದರು. ಜುಗೂಳ, ಶಹಾಪುರ ಹಾಗೂ ಮಂಗಾವತಿ ಗ್ರಾಮಸ್ಥರಿಗೆ ಪುನರ್ವಸತಿ ಕಲ್ಪಿಸುವ ಕುರಿತು, ಅಧಿಕಾರಿಗಳು ಹಾಗೂ ಜನ ಪ್ರತಿನಿಧಿಗಳೊಂದಿಗೆ ಮುಖ್ಯಮಂತ್ರಿ ಸಮಾಲೋಚಿಸಿದರು.

<><><>

ರಾಜ್ಯದ ಮಲೆನಾಡು ಸೇರಿ, ಹಲವೆಡೆಯ ಗುಡ್ಡ ಕುಸಿತದ ಘಟನೆಗಳನ್ನು ತಡೆಯಲು, ರಾಜ್ಯ ಸರ್ಕಾರ 300 ಕೋಟಿ ರೂಪಾಯಿ ವೆಚ್ಚದಲ್ಲಿ, ವೈಜ್ಞಾನಿಕ ಕಾಮಗಾರಿ ಕೈಗೊಳ್ಳಲಿದೆ ಎಂದು, ಕಂದಾಯ ಖಾತೆ ಸಚಿವ ಕೃ ್ಣ ಬೈರೇಗೌಡ ತಿಳಿಸಿದ್ದಾರೆ. ಚಿಕ್ಕಮಗಳೂರು ಜಿಲ್ಲೆ, ಮುಳ್ಳಯ್ಯನಗಿರಿಯ ಕವಿಕಲ್ ಗಂಡಿ ಬಳಿ, ಭೂ ಕುಸಿತ ಉಂಟಾಗಿರುವ ಸ್ಥಳಗಳಿಗೆ ಭೇಟಿ ನೀಡಿ, ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು. ಕಳೆದ 20 ದಿನಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾದ ಹಿನ್ನೆಲೆ, ಅನಾಹುತಗಳಾಗಿವೆ. ಕಳೆದ ವ ರ್ ಇಡೀ ರಾಜ್ಯದಲ್ಲಿ ಭೂ ಕುಸಿತದ ಸಂಭಾವ್ಯ ಪ್ರದೇಶಗಳ ಸಮೀಕ್ಷೆ ಕೈಗೊಳ್ಳಲಾಗಿದೆ. ವರದಿಯನ್ನು ಮಲೆನಾಡು ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ. 61 ಸಾವಿರದ 700 ಹೆಕ್ಟರ್ ಪ್ರದೇಶದ ಬೆಳೆ ಹಾನಿಯಾಗಿದೆ ಎಂದರು.

<><><>

ಇಂದು ಅಂತಾರಾಷ್ಟ್ರೀಯ ರಕ್ತನಾಳಗಳ ದಿನ. ಅಂಗಾಂಗ ದಾನದಲ್ಲಿ ಕರ್ನಾಟಕ, ದೇಶಕ್ಕೆ 2ನೇ ಸ್ಥಾನ ಪಡೆದಿದೆ ಎಂದು ಹೆಮ್ಮೆಯಿಂದ ತಿಳಿಸಲು, ತಮಗೆ ಸಂತೋಷವಾಗಿದೆ ಎಂದು, ಆರೋಗ್ಯ ಖಾತೆ ಸಚಿವ ದಿನೇಶ್ ಗುಂಡೂರಾವ್ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ, ಪ್ರಕಟಿಸಿದ್ದಾರೆ. ಕಳೆದ 2023 ರಲ್ಲಿ 178 ಜನ ಹಾಗೂ ಪ್ರಸ್ತುತ 2024ರಲ್ಲಿ ಈ ವರೆಗೆ, 86 ಜನ ಅಂಗಾಂಗ ದಾನ ಮಾಡಿದ್ದಾರೆ. ಒಬ್ಬ ಅಂಗಾಂಗ ದಾನಿ, ಅಂಗಾಂಶ ದಾನದ ಮೂಲಕ ಎಂಟು ಜೀವಗಳನ್ನು ಉಳಿಸಬಹುದು ಮತ್ತು ಅನೇಕರ ಜೀವನ ಮಟ್ಟವನ್ನು ಆರೋಗ್ಯಪೂರ್ಣವಾಗಿ ಹೆಚ್ಚಿಸಬಹುದು. jeeva sarthakathe.karnataka.gov.in ನಲ್ಲಿ, ಅಂಗಾಂಗ ದಾನದ ಪ್ರತಿಜ್ಞೆ ಕೈಗೊಳ್ಳುವಂತೆ ಅವರು, ಮನವಿ ಮಾಡಿದ್ದಾರೆ.

<><><>

ಲೋಕೋಪಯೋಗಿ ಇಲಾಖೆಯ ನಿವೃತ್ತ ಮುಖ್ಯ ಕಾರ್ಯದರ್ಶಿ, ಧಾರವಾಡ ನಿವಾಸಿ ಜಿ.ಸಿ. ತಲ್ಲೂರು ಅವರು, ಧಾರವಾಡದ ಎಸ್.ಡಿ.ಎಂ. ಆಸ್ಪತ್ರೆಗೆ ದೇಹದಾನ ಮಾಡುವ ವಾಗ್ದಾನ ಮಾಡಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಅವರು ತಮ್ಮ ಅನಿಸಿಕೆ ವ್ಯಕ್ತ ಪಡಿಸಿದ್ದಾರೆ.

<><><>

ಜೆ.ಸಿ. ತಲ್ಲೂರು ಧ್ವನಿ 50 ಸೆಕೆಂದುಗಳು

<><><>

ಕ್ಯಾನ್ಸರ್ ಸೇರಿದಂತೆ, ಅಗತ್ಯ ಜೀವ ರಕ್ಷಕ ಔಷಧಗಳ ದರವನ್ನು, ಶೇಕಡ 50 ರಿಂದ ಶೇಕಡ 80 ರಷ್ಟು ಕಡಿಮೆ ಮಾಡಲಾಗಿದ್ದು, ಬಡ ಜನರಿಗೆ ಅನುಕೂಲವಾಗುತ್ತಿದೆ ಎಂದು, ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಜೆ.ಪಿ.ನಡ್ಡಾ, ಲೋಕಸಭೆಗೆ ತಿಳಿಸಿದ್ದಾರೆ. 13 ಸಾವಿರ ಜನೌಷಧಿ ಕೇಂದ್ರಗಳಲ್ಲಿ ಕಡಿಮೆ ದರದ ಔಷಧಗಳು ಲಭ್ಯವಿದ್ದು, ಮುಂದಿನ 5 ವರ್ಷಗಳಲ್ಲಿ ಜನೌಷಧಿ ಕೇಂದ್ರಗಳ ಸಂಖ್ಯೆಯನ್ನು 25 ಸಾವಿರಕ್ಕೆ ಏರಿಸಲು ಉದ್ದೇಶಿಸಲಾಗಿದೆ ಎಂದು ಮಾಹಿತಿ ನೀಡಿದರು. ಎಲ್ಲ ಪ್ರಕಾರದ ಕ್ಯಾನ್ಸರ್‌ಗಳನ್ನು ಎಳವೆಯಲ್ಲೇ ಗುರುತಿಸಲು, ಆದ್ಯತೆ ನೀಡಲಾಗಿದೆ, ಎಂದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಕೇಂದ್ರದ ವಾರ್ತಾ ಮತ್ತು ಪ್ರಸಾರ ಸಚಿವಾಲಯ, ಕಲಬುರಗಿಯ ಶರಣ ಬಸವೇಶ್ವರ ವಿದ್ಯಾವರ್ಧಕ ಸಂಘದ, ಅಂತರವಾಣಿ ಸಮುದಾಯ ಬಾನುಲಿ ಕೇಂದ್ರಕ್ಕೆ, ರಾಷ್ಟ್ರ ಮಟ್ಟದ ತೃತೀಯ ಪುರಸ್ಕಾರ ನೀಡಿ, ಗೌರವಿಸಿದೆ. ಐನೂರಕ್ಕೂ ಹೆಚ್ಚು ಸಮುದಾಯ ಬಾನುಲಿ ಕೇಂದ್ರಗಳು ಭಾಗವಹಿಸಿದ್ದ ಈ ಸ್ಪರ್ಧೆಯಲ್ಲಿ, ಸುಸ್ಥಿರತೆ ಮಾದರಿ ವಿಭಾಗದಲ್ಲಿ, ರಾಜ್ಯದ ಏಕೈಕ, ಅಂತರವಾಣಿ ಸಮುದಾಯ ಬಾನುಲಿ ಕೇಂದ್ರಕ್ಕೆ, 50 ಸಾವಿರ ರೂಪಾಯಿ ನಗದು ಪುರಸ್ಕಾರ ನೀಡಲಾಗಿದೆ. ಸಮುದಾಯ ಬಾನುಲಿ ಕೇಂದ್ರದ ನಿರ್ದೇಶಕ, ದೃಷ್ಟಿ ವಿಶೇಷಚೇತನ ಪ್ರಾಧ್ಯಾಪಕ, ಡಾಕ್ಟರ್ ಶಿವರಾಜಶಾಸ್ತ್ರಿ ಹೇರೂರ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಡಾಕ್ಟರ್ ಶಿವರಾಜ ಶಾಸ್ತ್ರಿ ಹೇರೂರ ಧ್ವನಿ 40 ಸೆಕೆಂದುಗಳು

<><><>

12ನೇ ತಾರೀಖು ಸೋಮವಾರ, ವಿಶ್ವ ಆನೆ ದಿನ. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ, ಮಾನವ, ಆನೆ ಸಂಘರ್ಷ ಕುರಿತಂತೆ, ಅಂತಾರಾಷ್ಟ್ರೀಯ ಸಮ್ಮೇಳನ ಜರುಗಲಿದೆ ಎಂದು ರಾಜ್ಯ ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, 11 ರಾಷ್ಟ್ರಗಳ 17ಕ್ಕೂ ಹೆಚ್ಚು ಪ್ರತಿನಿಧಿಗಳು ಹಾಗೂ ದೇಶದ ವಿವಿಧ ರಾಜ್ಯಗಳ 660 ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ ಎಂದರು. ರಾಜ್ಯದಲ್ಲಿ 6 ಸಾವಿರದ 395 ಆನೆಗಳಿದ್ದು, ದೇಶದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ. 563 ಹುಲಿಗಳನ್ನು ಹೊಂದಿರುವ ಕರ್ನಾಟಕ, ದೇಶದಲ್ಲಿ 2ನೇ ಸ್ಥಾನದಲ್ಲಿದೆ ಎಂದು ಸಚಿವ ಖಂಡ್ರೆ ಹೇಳಿದರು.

<><><>

ಕರ್ನಾಟಕದ ಆದಿ ಚುಂಚನಗಿರಿಯನ್ನು, ನವಿಲು ಸಂರಕ್ಷಣಾ ವಲಯ ಎಂದು ಕೇಂದ್ರ ಸರ್ಕಾರ ಘೋಷಿಸಿರುವುದಾಗಿ, ಕೇಂದ್ರ ಅರಣ್ಯ ಖಾತೆ ಸಚಿವ ಭೂಪೇಂದರ್ ಯಾದವ್ ಲೋಕಸಭೆಗೆ ತಿಳಿಸಿದ್ದಾರೆ. ನವಿಲುಗಳು ಶಾಖಾಘಾತದಿಂದ ಸಾವನ್ನಪ್ಪಿವೆ. ನವಿಲುಗಳ ಸಂವರ್ಧನೆ ಮತ್ತು ಸಂರಕ್ಷಣಾ ಕೇಂದ್ರಗಳನ್ನು ಸಚಿವಾಲಯ ಸ್ಥಾಪಿಸಿದೆ ಎಂದು, ಸಚಿವರು ಹೇಳಿದರು.

<><><>

77ನೇ ಸ್ವಾತಂತ್ರ್ಯೋತ್ಸವ ಸಂಭ್ರಮವನ್ನು ವಿಶಿಷ್ಟ ಹಾಗೂ ವಿಭಿನ್ನವಾಗಿ ಆಚರಿಸಲು, ಧಾರವಾಡ ಜಿಲ್ಲಾಡಳಿತ, 15 ದಿನಗಳ ವಿನೂತನ ಪ್ರದರ್ಶಿನಿಯನ್ನು, ಸರ್ಕಾರಿ ಕಲಾ ಮಂದಿರದಲ್ಲಿ, ಆಯೋಜಿಸಿದೆ. 'ಉತ್ತರ ಕರ್ನಾಟಕದ ವಾಸ್ತುಶಿಲ್ಪ ಪರಂಪರೆ ಹಾಗೂ ಸ್ಮಾರಕಗಳು; ಅಂದು ಮತ್ತು ಇಂದು' ಎಂಬ, ಛಾಯಾಚಿತ್ರ ಪ್ರದರ್ಶಿನಿಯನ್ನು, ಭಾರತೀಯ ಪುರಾತತ್ವ ಸರ್ವೇಕ್ಷಣ ಸಹಯೋಗದಲ್ಲಿ, ಜಿಲ್ಲಾಡಳಿತ 9ನೇ ತಾರೀಖಿನ ವರೆಗೆ ಹಮ್ಮಿಕೊಂಡಿದೆ.

<><><>

ಮಹಾರಾಷ್ಟ್ರದ ಸೊಲ್ಲಾಪೂರ ಜಿಲ್ಲೆಯ, ಉಜ್ಜನಿ ಮತ್ತು ಸತಾರಾ ಜಿಲ್ಲೆಯ, ವೀರ ಜಲಾಶಯದಿಂದ, ಭೀಮಾ ನದಿಗೆ ನಿನ್ನೆ 1 ಲಕ್ಷ ಕ್ಯುಸೆಕ್ ನೀರು ಹರಿಬಿಡಲಾಗಿದೆ.ಕಲಬುರಗಿ ಜಿಲ್ಲೆಯ ಭೀಮಾ ನದಿ ತೀರದಲ್ಲಿ ಕಟ್ಟೆಚ್ಚರ ವಹಿಸುವಂತೆ, ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಸೂಚಿಸಿದ್ದಾರೆ. ಭೀಮಾ ನದಿಯ ಸೊನ್ನ ಬ್ಯಾರೇಜಿಗೆ ನೀರು ತಲುಪಲು ಸುಮಾರು 24 ಗಂಟೆ ಸಮಯ ತಗುಲಲಿದೆ.

<><><>

ರಾಜಧಾನಿ ಬೆಂಗಳೂರಿನಲ್ಲಿ ಮತ್ತೊಂದು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಿಸಲು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಹಾಗೂ ಕೈಗಾರಿಕೆ ಖಾತೆ ಸಚಿವ ಎಂ.ಬಿ.ಪಾಟೀಲ ಸಂಬಂಧಿತ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ವಿಸ್ತೃತ ಚರ್ಚೆ ನಡೆಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನೂತನ ವಿಮಾನ ನಿಲ್ದಾಣಕ್ಕೆ ಐಡೆಕ್ ಸಂಸ್ಥೆ 7 ಜಾಗೆಗಳನ್ನು ಗುರುತಿಸಿದೆ. ವಿಮಾನ ನಿಲ್ದಾಣಕ್ಕೆ ಯಾವ ಜಾಗ ಸೂಕ್ತ ಎನ್ನುವುದನ್ನು ಬೆಂಗಳೂರು ಮತ್ತು ಕರ್ನಾಟಕದ ಹಿತದೃಷ್ಟಿಯಿಂದ ತೀರ್ಮಾನಿಸಲಾಗುವುದು ಎಂದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಬೆಂಗಳೂರು ಕೆಫೆ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿ, ಶಂಕಿತ ಭಯೋತ್ಪಾದಕರನ್ನು ರಾಷ್ಟ್ರೀಯ ತನಿಖಾ ದಳ – ಎನ್.ಐ.ಎ. ಘಟನಾ ಸ್ಥಳಕ್ಕೆ ಕರೆ ತಂದು, ಮಹಜರು ನಡೆಸಿತು.

<><><>

ಮಲಪ್ರಭಾ ಕಾಲುವೆಗಳಿಂದ ನೀರು ಹರಿಸಲಾಗುತ್ತಿದ್ದು, ನವಲಗುಂದದ ಕೆರೆಗಳನ್ನು ಭರ್ತಿ ಮಾಡುವಂತೆ, ಶಾಸಕ ಎನ್.ಎಚ್. ಕೋನರೆಡ್ಡಿ, ಹುಬ್ಬಳ್ಳಿಯಲ್ಲಿ ನಡೆದ ಕೆಡಿಪಿ ಸಭೆಯಲ್ಲಿ, ಸೂಚಿಸಿದ್ದಾರೆ.

<><><>

ಕಾಮ್ರೇಡ್ ಶಿವದಾಸ ಘೋ ್ ಅವರ, 48ನೇ ಸಂಸ್ಮರಣಾ ದಿನದ ಹಿನ್ನೆಲೆ, ಧಾರವಾಡದ ಎಸ್.ಯು.ಸಿ.ಐ ಕಮ್ಯುನಿಸ್ಟ್ ಪಕ್ಷದ ಕಚೇರಿಯಲ್ಲಿ, ಗಣ್ಯರು ಗೌರವಾರ್ಪಿಸಿದರು.

<><><>

ಧಾರವಾಡದ ಸಂಗೀತಗಾರ್ತಿ ವೀಣಾ ಸವದತ್ತಿ ಅವರಿಗೆ, ನಂದಾ ಪಾಟೀಲ ವಚನ ಸಂಗೀತ ಪುರಸ್ಕಾರವನ್ನು, ಇಂದು ಸಂಜೆ 6 ಗಂಟೆಗೆ, ರಾ.ಹ. ದೇಶಪಾಂಡೆ ಸಭಾ ಭವನದಲ್ಲಿ ಪ್ರದಾನ ಮಾಡಲಾಗುತ್ತಿದೆ.

<><><>

ಗದಗ ಜಿಲ್ಲಾ ತಂಬಾಕು ನಿ ೇಧ ಕೋಶದ ಅಧಿಕಾರಿಗಳು, ಕೊಟ್ಪಾ ಕಾಯ್ದೆ ಅಡಿ, 34 ಪ್ರಕರಣಗಳನ್ನು ದಾಖಲಿಸಿದ್ದಾರೆ. 6 ಸಾವಿರದ ನೂರು ರೂಪಾಯಿ ದಂಡ ವಿಧಿಸಿದ್ದಾರೆ.

<><><>

ಅಲ್ಪ ಸಂಖ್ಯಾತರ ನಿರ್ದೇಶನಾಲಯದ ನಿರ್ದೇಶಕ ಜೀಲಾನಿ ಮೊಕಾಶಿ ಅವರು ನಾಳೆ ಧಾರವಾಡ ಜಿಲ್ಲೆ ಪ್ರವಾಸ ಕೈಗೊಳ್ಳಲಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಮುಳುಗಡೆ ಗ್ರಾಮಗಳಿಗೆ ಶಾಶ್ವತ ಪುನರ್ವಸತಿ ಕಲ್ಪಿಸಲು, ಸರ್ಕಾರ ಬದ್ಧ– ಮುಖ್ಯಮಂತ್ರಿ ಸಿದ್ದರಾಮಯ್ಯ.
- ಮಲೆನಾಡಿನ ಗುಡ್ಡ ಕುಸಿತದ ಘಟನೆ ತಡೆಯಲು, ವೈಜ್ಞಾನಿಕ ಕಾಮಗಾರಿ – ಕೃ ್ಣ ಬೈರೇಗೌಡ.
- ಓರ್ವ ಅಂಗಾಂಗ ದಾನಿ, ಎಂಟು ಜೀವಗಳನ್ನು ಉಳಿಸಬಹುದು – ದಿನೇಶ್ ಗುಂಡೂರಾವ್.
- ಆಗಸ್ಟ್ 12, ವಿಶ್ವ ಆನೆ ದಿನ; ಮಾನವ ಹಾಗೂ ಆನೆ ಸಂಘರ್ಷ ಕುರಿತ, ಅಂತಾರಾಷ್ಟ್ರೀಯ ಸಮ್ಮೇಳನ – ಈಶ್ವರ ಖಂಡ್ರೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 9 ಗಂಟೆ 5 ನಿಮಿಷಕ್ಕೆ.

<><><>

ಹರ್ಷ